**<u>ದಿನಾಂಕ : *13-06-2025* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ *1* ನೇ ಎದರುದಾರರ ಪರವಾಗಿ ಶ್ರೀ. ಎಸ್ ಎಸ್ ಟಿ ವಕೀಲರಿಂದ</u>**

ನಾನು ಈ ದಿನ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇದ್ದು, ನಾನೇ ಹೇಳಿ ಬರೆಸಿದ್ದು, ಅದರಲ್ಲಿನ ಸಹಿಗಳು ನನ್ನದೇ ಇರುತ್ತವೆ.

ನಿಆರ್-1 ಃ ಎಮ್ ವಿ ಸಿ ನಂ.541/22 ಇದರಲ್ಲಿನ ಅರ್ಜಿಯ ದೃಢೀಕೃತ ಪ್ರತಿ

ನಿಆರ್-2 ಃ ಎಮ್ ವಿ ಸಿ ನಂ.541/22 ಇದರಲ್ಲಿನ ಆದೇಶ ಪುಟಗಳ ದೃಢೀಕೃತ ಪ್ರತಿ

ನಿಆರ್-3 ಃ ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ

**ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರುತ್ತೇನೆ.**

**ಪಾಟೀ ಸವಾಲು ಃ ಅರ್ಜಿದಾರರ ಪರ ಶ್ರೀ ಎಮ್ ಹೆಚ್ ಎಮ್ ವಕೀಲರಿಂದ**

ಅಪಘಾತಕ್ಕೆ ಸಂಬಂದಪಟ್ಟಂತ ಎದುರಿಗೆ ಬರುತ್ತಿದ್ದ ಬಸ್ಸಿನ ಮೇಲೆ ದೂರು ನೀಡಿರುವುದಿಲ್ಲ. ನಾನು ಆಸ್ಪತ್ರೆಯಿಂದ ಡಿಸ್ಚಾರ್ಜ ಆದ ನಂತರ ಅಪಘಾತಕ್ಕೆ ಬಸ್ಸಿನವರದು ಕಾರಣ ಇರುತ್ತದೆ ಎಂದು ದೂರು ನೀಡಿರುವುದಿಲ್ಲ. ನನ್ನ ಕಾರಿನಲ್ಲಿ ನನ್ನ ಜೊತೆ ನನ್ನ ಹೆಂಡತಿ ಇದ್ದು, ಅವರೂ ಕೂಡ ಬಸ್ಸಿನವರ ತಪ್ಪು ಇರುತ್ತದೆ ಎಂದು ದೂರು ನೀಡಿರುವುದಿಲ್ಲ. ನಾನು ಓವರ ಟೇಕ ಮಾಡುವಾಗ ಬಸ್ಸಿಗೆ ನಾನೇ ಹೋಗಿ ಡಿಕ್ಕಿ ಪಡಿಸಿರುತ್ತೇನೆ ಎಂದರೆ ಸಾಕ್ಷಿದಾರರು ನಾನು ಓವರ ಟೇಕ ಮಾಡಿದ್ದು ನಿಜ ಆದರೆ ಬಸ್ಸಿನ ಚಾಲಕರು ಇನ್ನು ಸ್ವಲ್ಪ ಎಡಗಡೆ ಹೋಗಬಹುದಾಗಿತ್ತು ಎಂದು ಹೇಳುತ್ತಾರೆ. ಎದುರಿಗೆ ಬಸ್ಸು ಬರುತ್ತಿರುವುದನ್ನು ನೋಡಿ ನಾನು ಓವರ ಟೇಕ ಮಾಡಿದ್ದರಿಂದ ಸದರಿ ಅಪಘಾತವು ಸಂಬವಿಸಿರುತ್ತದೆ ಎಂದರೆ ಸರಿ. ಪೋಲಿಸರು ಸಲ್ಲಿಸಿದ ದಾಖಲೆಗಳ ಪ್ರಕಾರ ಬಸ್ಸಿನ ಚಾಲಕನು ತನ್ನ ಎಡಗಡೆ ಇದ್ದ ಎಂದರೆ ಸರಿ. ಸದರಿ ಅಪಘಾತವು ನನ್ನ ಒಬ್ಬನ ನಿರ್ಲಕ್ಷ್ಯತನದಿಂದ ಆಗಿರುತ್ತದೆ ಎಂದರೆ ಸಾಕ್ಷಿದಾರರು ಬಸ್ಸಿನ ಚಾಲಕನ ತಪ್ಪು ಕೂಡ ಇರುತ್ತದೆ ಎಂದು ಹೇಳುತ್ತಾರೆ. ಬಸ್ಸಿನ ಚಾಲಕನಿಗೆ ತನ್ನ ಎಡಗಡೆ ಇದ್ದು ಇನ್ನೂ ಸ್ವಲ್ಪ ಎಡಗಡೆ ತೆಗೆದುಕೊಂಡಿದ್ದರೆ ಬಸ್ಸು ಪಲ್ಟಿ ಆಗುವ ಸಂಭವ ಇತ್ತು ಎಂದರೆ ಸಾಕ್ಷಿದಾರರು ರಸ್ತೆ ತುಂಬ ಅಗಲ ಇದ್ದು, ಬಸ್ಸಿನ ಚಾಲಕನು ಇನ್ನೂ ಸ್ವಲ್ಪ ಎಡಗಡೆ ಹೋಗಬಹುದಾಗಿತ್ತು ಎಂದು ಹೇಳುತ್ತಾರೆ. ನಾನು ಈ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 2 ನೇ ಎದರುದಾರರ ಪರ ಶ್ರೀ ಐ ಎಸ್ ವಾಯ್ ವಕೀಲರಿಂದ**

ಮೃತ ಸಂತೋಷ ನನ್ನ ಜೊತೆ ಕೆಲಸ ಮಾಡುತ್ತಿದ್ದರು. ನಾನು ದಿನಗೂಲಿ ನೌಕರ ಎಂದು ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನಾನು ದಿನಗೂಲಿ ನೌಕರ ಎಂದು ಕೆಲಸ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 24-08-2022 ರಂದು ನಾನು ಮೃತ ಸಂತೋಷ ರವರನ್ನು ಕರೆದುಕೊಂಡು ಬೆಂಗಳೂರಿಗೆ ಹೋಗುತ್ತಿದ್ದೆ ಎಂದರೆ ಸಾಕ್ಷಿದಾರರು ಮೃತ ಸಂತೋಷರವರದು ಕೆಲಸ ಇತ್ತು ಮತ್ತು ನನ್ನ ಕೆಲಸವೂ ಇತ್ತು ಹಾಗಾಗಿ ಇಬ್ಬರು ಕೂಡಿ ಹೋಗುತ್ತಿದ್ದೇವು ಎಂದು ಹೇಳುತ್ತಾರೆ. ಮೃತ ಸಂತೋಷ ರವರು ನನ್ನನ್ನು ಬಾಡಿಗೆ ನಾತೆಯಿಂದ ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ನಾನು ಆ ದಿನ ಸೀಟ ಬೆಲ್ಟ ಹಾಕಿದ್ದೆ. ಮೃತ ಸಂತೋಷ ರವರ ಕೂಡ ಸೀಟ ಬೇಲ್ಟನ್ನು ಹಾಕಿದ್ದರು. ಮೃತ ಸಂತೋಷ ರವರು ಸೀಟ ಬೆಲ್ಟನ್ನು ಹಾಕಿರಲಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಮುಂದೆ ಮೃತ ಸಂತೋಷ ರವರು ಸೀಟ ಬೆಲ್ಟ ಹಾಕಿರುವ ಬಗ್ಗೆ ಹೇಳಿಕೆ ನೀಡಿದ್ದೀರಾ ಎಂದರೆ ಸಾಕ್ಷಿದಾರರು ಪೋಲಿಸರು ಕೇಳಿರುವುದಿಲ್ಲ ಎಂದು ಹೇಳುತ್ತಾರೆ. ನನಗೆ ಅಪಘಾತದಲ್ಲಿ ಸಣ್ಣ ಪುಟ್ಟ ಗಾಯಗಳು ಆಗಿರುತ್ತವೆ. ಮೃತ ಸಂತೋಷ ರವರು ಸೀಟ ಬೆಲ್ಟ ಹಾಕದೇ ಇರುವುದರಿಂದ ಅಪಘಾತ ಸಂಭವಿಸಿ ತಲೆಗೆ ಪಟ್ಟಾಗಿ ಮಾರಣಾಂತಿಕ ಗಾಯಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಪೋಲಿಸರು ಸಲ್ಲಿಸಿದ ದೋಷಾರೋಪಣಾ ಪಟ್ಟಿಯನ್ನು ನಾನು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ. ಮೃತ ಸಂತೋಷ ರವರು ನಮ್ಮ ಮನೆಯ ಪಕ್ಕದಲ್ಲಿ ಇದ್ದ ಕ್ವಾಟರ್ಸನಲ್ಲಿ ಇದ್ದರು. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಸಂಗತಿಗಳ ಬಗ್ಗೆ ತಿಳಿದಿರುತ್ತದೆ. ನನ್ನ ಮಾಹಿತಿ ಮೇರೆಗೆ ಅದನ್ನು ತಯಾರಿಸಿರುತ್ತಾರೆ. ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಎಲ್ಲ ಸಂಗತಿಗಳನ್ನು ನನ್ನ ತಕರಾರಿನಲ್ಲಿ ನಮೂದಿಸಿರುತ್ತೇನೆ. ತಕರಾರಿನಲ್ಲಿ ಇಲ್ಲದೇ ಇರುವ ಸಂಗತಿಗಳನ್ನು ಅರ್ಜಿದಾರರಿಗೆ ಅನುಕೂಲ ಆಗಲಿ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ವಿಮಾ ಪತ್ರವನ್ನು ಹಾಜರು ಪಡಿಸಿರುತ್ತೇನೆ. ನನ್ನ ಡಿ ಎಲ್ ನ್ನು ಹಾಜರು ಪಡಿಸಿರುತ್ತೇನೆ. ನನಗೆ ಅಪಘಾತವಾದ ದಿನ ಡಿಎಲ್ ಇರಲಿಲ್ಲ ಎಂದರೆ ಸರಿಯಲ್ಲ. ಬಾಡಿಗೆನಾತೆಯಿಂದ ನನ್ನ ಕಾರನ್ನು ಮೃತ ಸಂತೋಷ ರವರು ತೆಗೆದುಕೊಂಡಿದ್ದರಿಂದ ಪರಿಹಾರದ ಹಣವನ್ನು ಅರ್ಜಿದಾರರಿಗೆ, 3 ಮತ್ತು 4 ನೇ

ಎದರುದಾರರಿಗೆ ಕೊಡಲು ನಾನೇ ಭಾಧ್ಯಸ್ತನು ಇರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು :** 3 ನೇ ಎದರುದಾರರು ತಮ್ಮ ತಕರಾರನ್ನು ಸಲ್ಲಿಸದೇ ಇರುವುದರಿಂದ ಮತ್ತು ಅವರು ಈ ದಿನ ಗೈರುಹಾಜರಾಗಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.

**<u>ದಿನಾಂಕ : *10-06-2025* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು : ಅರ್ಜಿದಾರರ ಪರ ಶ್ರೀ ಟಿ ಎಮ್ ಸಿ ವಕೀಲರಿಂದ</u>**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಲು ಮಾಹಿತಿಯನ್ನು ನಾನು ನೀಡಿರುತ್ತೆನೆ. ಅಪಘಾತವಾದ ದಿನ ನಾನು ಬುರಾನಸಾಬ ರವರಿಗೆ ಅಪಘಾತ ಪಡಿಸಿ ಅವರ ಸಾವಿಗೆ ಕಾರಣನಾಗಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿದೆ ಎಂದು ಪೋಲಿಸರು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬುರಾನಸಾಬ ರವರ ತಪ್ಪಿನಿಂದ ಅಪಘಾತ ಆಗಿದೆ ಎಂದು ಸುಳ್ಳಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವಾದಾಗ ನನ್ನ ವಾಹನ ನಿಂತಿತ್ತು ಎಂದು ಸುಳ್ಳಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿದ್ದರಿಂದ ಮತ್ತು ವಾಹನದ ಮಾಲೀಕ ನಾನಾಗಿದ್ದರಿಂದ ಪರಿಹಾರದ ಹಣವನ್ನು ಕೊಡಲು ನಾನು ಭಾದ್ಯಸ್ತನು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಮತ್ತು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.